# ವಚನ ದೀಪಿಕೆ

*ಡಾ. ಲತಾ ಆರ್[1]

ವಚನವೆಂಬುದೇ ಹಾಗೇ ನಮ್ಮ ಬಾಳಿಗೆ ಬೆಳಕು ನೀಡುವಂತದ್ದು. ನಡುಗನ್ನಡ ಕಾಲದ ಈ ಸಾಹಿತ್ಯ ಇಂಥ ಯಾವುದೇ ಭೇದ ಭಾವವಿಲ್ಲದೆ ಎಲ್ಲರಿಗೂ ದಾರಿ ದೀಪವಾಗಿ ಇಂದಿಗೂ ನಿಂತಿದೆ. ಮುಂದಿನ ಪೀಳಿಗೆಗೂ ಕೂಡ ದಾರಿ ದೀಪವಾಗಿಯೇ ನಿಲ್ಲುತ್ತದೆ.

**ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ**
**ಇರುಳೆಲ್ಲ ನಡೆದನಾ ಸುಂಕಕಂಜಿ**
**ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತಾ**
**ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ**

**ಹರ ತನ್ನ ಭಕ್ತರ ತಿರಿವಂತೆ ಮಾಡುವ**
**ಒರೆದು ನೋಡುವ ಚಿನ್ನದಂತೆ**
**ಅರೆದು ನೋಡುವ ಚಂದನದಂತೆ**
**ಅರಿದು ನೋಡುವ ಕಬ್ಬಿನ ಕೋಲಿನಂತೆ**
**ಬೆದರದೆ ಬೆಚ್ಚದೆ ಇದ್ದಡೆ**
**ಕರವಿಡಿವೆತ್ತಿಕೊಂಬ ನಮ್ಮ ರಾಮನಾಥ**

ಜೇಡರ ದಾಸಿಮಯ್ಯನ ಈ ವಚನದ ಸಾಲುಗಳು ಮನುಷ್ಯನಿಗೆ ಆಸೆಯೆಂಬುದಕ್ಕೆ ಕೊನೆಯಿಲ್ಲ ಎಂಬುದನ್ನು ಧ್ವನಿಸುತ್ತದೆ. ಅವನು ತನ್ನ ಆಸೆಯನ್ನು ಪೂರೈಸಲು ಎಂತಹ ಕೆಲಸಕ್ಕೂ ಸಿದ್ಧವಾಗಿರುತ್ತಾನೆ ಎಂಬುದನ್ನು ಧ್ವನಿಸುತ್ತದೆ. ಹರಿದ ಗೋಣಿಯಲ್ಲಿ ತುಂಬಿರುವ ಧಾನ್ಯ ಹೇಗೆ ಇರದೇ ಎಲ್ಲವೂ ಚೆಲ್ಲಿ ವ್ಯರ್ಥವಾಗುತ್ತದೋ ಅದೇ ರೀತಿ ಕೆಟ್ಟ ಮನಸ್ಸಿನಿಂದ ಭಕ್ತಿಯನ್ನು ಮಾಡಿದರೆ ವ್ಯರ್ಥ ಎಂಬುದನ್ನು ಹೇಳುತ್ತಾ ತನ್ನ ಮನಸ್ಸಿನ ಮೇಲೆ ಯಾರಿಗೆ ನಿಗ್ರಹವಿರುತ್ತದೋ! ಅವರ ಭಕ್ತಿ ದೇವರಿಗೆ ಒಪ್ಪುತ್ತದೆ ಎಂಬುದನ್ನು ಈ ವಚನವು ಧ್ವನಿಸುತ್ತದೆ.

---

[1] ಕನ್ನಡ ಅತಿಥಿ ಉಪನ್ಯಾಸಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು

ಎರಡನೇಯ ವಚನವು ಮೊದಲನೆಯ ವಚನದ ಮುಂದುವರಿಕೆಯಾಗಿ ಮಾಯೆ ಎಂಬುದು ಯಾರನ್ನು ಬಿಡುವುದಿಲ್ಲ. ಆ ಮಾಯೆಯಿಂದ ಹೊರಬಂದಾಗ ಮಾತ್ರ ಎಲ್ಲವೂ ಸುಲಭವಾಗಿ ನಡೆಯುತ್ತದೆ, ಹಾಗೂ ದೇವರು ಮೆಚ್ಚುತ್ತಾನೆ ಎಂಬುದು ಈ ವಚನದ ತಾತ್ಪರ್ಯ.

**ಆಸೆಗೆ ಸತ್ತುದು ಕೋಟಿ ಆಮಿಷಕ್ಕೆ ಸತ್ತುದು ಕೋಟಿ**
**ಹೊನ್ನು ಹೆಣ್ಣು ಮಣ್ಣಿಗೆ ಸತ್ತುದು ಕೋಟಿ**
**ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ**

ಅಲ್ಲಮಪ್ರಭುವಿನ ಈ ವಚನವು ಮನುಷ್ಯನ ಆಸೆಯು ಎಷ್ಟು ಅತಿಯಾದದ್ದು ಎಂಬುದನ್ನು ಧ್ವನಿಸುತ್ತಾ ಇಂದಿನ ಮಾನವರು ಹಣಕ್ಕೆ ಆಸೆಗೆ, ಹೊನ್ನಿಗೆ ಹೆಣ್ಣಿಗೆ ಸೋತಷ್ಟು ಒಳ್ಳೆಯತನಕ್ಕೆ ಸೋಲಲ್ಲ ಎಂಬುದನ್ನು ಧ್ವನಿಸುತ್ತಾ ಇಲ್ಲಿ ಅಲ್ಲಮಪ್ರಭು ಇಂತಹ ಸಣ್ಣ ವಿಷಯಕ್ಕೆ ಸೋತದ್ದು ಸತ್ತಷ್ಟು ಜನ ಗುಹೇಶ್ವರ ನಿನಗಾಗಿ ಭಕ್ತಿಗಾಗಿ ಸತ್ತವರನ್ನು ನೋಡಿಲ್ಲ ಎಂಬುದನ್ನು ವಿವರಿಸುತ್ತಾರೆ.

**ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣ ಭೋ !**
**ಸತ್ಯವ ನುಡಿವುದೆ ದೇವಲೋಕ ; ಮಿಥ್ಯವ ನುಡಿವುದೆ ಮರ್ತ್ಯಲೋಕ**
**ಆಚಾರವೇ ಸ್ವರ್ಗ ; ಅನಾಚಾರವೆ ನರಕ**
**ಕೂಡಲಸಂಗಮದೇವಾ, ನೀವೆ ಪ್ರಮಾಣು**

ನರಕ ಸ್ವರ್ಗವೆಂಬುದು ಬೇರೆಲ್ಲೂ ಇಲ್ಲ. ಭೂಮಿಯಲ್ಲೋ ದೇವಲೋಕದಲ್ಲೋ ಇಲ್ಲ. ಅದು ನಾನು ನಡೆಸುವ ಜೀವನದಲ್ಲಿಯೇ ಇದೆ. ಸತ್ಯವು ಎಲ್ಲಿ ಇರುತ್ತದೆ ಅದೇ ಸ್ವರ್ಗ ಸುಳ್ಳು ಅನಾಚಾರ ಎಲ್ಲಿ ಇರುತ್ತದೋ ಅದೇ ನರಕ ಅದಕ್ಕೆ ನೀನೆ ಸಾಕ್ಷಿ ಕೂಡಲ ಸಂಗಮದೇವ ಎಂದು ಹೇಳುತ್ತಾರೆ.

ದೇವರ ಸಾಕ್ಷಿಯಲ್ಲಿ ಸ್ವರ್ಗ ಮತ್ತು ನರಕ ಕಲ್ಪನೆಯನ್ನು ಸುಲಭವಾಗಿ ಇಲ್ಲಿ ಚಿತ್ರಿಸಿದ್ದಾರೆ.

**ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು**
**ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ**
**ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ**
**ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ**
**ಮಾರಯ್ಯಪ್ರಿಯ ಅಮರೇಶ್ವರಲಿಂಗವ ಮುಟ್ಟದ ಭಕ್ತಿ**

**ಆಸೆಯೆಂಬುದು ಅರಸಿಂಗಲ್ಲದೆ**
**ಶಿವಭಕ್ತರಿಗುಂಟೆ ಅಯ್ಯಾ**
**ರೋಷವೆಂಬುದು ಯಮ ದೂತರಿಗಲ್ಲದೆ**
**ಅಜಾತರಿಗುಂಟೆ ಅಯ್ಯಾ?**
**ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ**
**ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯಾ**

ಆಯ್ದಕ್ಕಿ ಲಕ್ಕಮ್ಮನ ಈ ಮೇಲಿನ ಮೊದಲ ವಚನಗಳಲ್ಲಿ ಭಕ್ತಿಯೆಂಬುದು ಎಷ್ಟು ಶ್ರೇಷ್ಠವಾಗಿರಬೇಕು ಮತ್ತು ಶುದ್ಧವಾಗಿರಬೇಕು ಎಂಬುದನ್ನು ಧ್ವನಿಸುತ್ತದೆ. ಗರ್ವದಿಂದ ಮಡುವ ಭಕ್ತಿ ಮಾತಿಗೆ ತಪ್ಪು ನಡೆಯುವ ಭಕ್ತಿ ಮನುಷ್ಯನ ಅರಿವನ್ನು ಯಾವ ರೀತಿ ಹಾಳು ಮಾಡುತ್ತದೆ ಎಂಬುದನ್ನು ಹಾಗೂ ಕೊಡದಿದ್ದರೂ ಪ್ರಚಾರಕ್ಕಾಗಿ ತ್ಯಾಗಿ ಎನಿಸಿಕೊಳ್ಳುವ ಭಕ್ತಿ ಹೆಣ್ಣಿಗೆ ಮುಡಿಯಿಲ್ಲದೆ ಹೂವು ಮುಡಿದರೆ ಎಷ್ಟು ಅಸುಂದರವಾಗಿರುತ್ತದೋ ಹಾಗೆ, ಒಡೆದ ಮಡಿಕೆಯಲ್ಲಿ ನೀರು ಹೇಗೆ ನಿಲ್ಲುವುದಿಲ್ಲವೋ ಅದೇ ರೀತಿಯಲ್ಲಿ ಶುದ್ಧ ಮನಸ್ಸಿನಿಂದ ಮಾಡದ ಭಕ್ತಿ ದೇವರಿಗೆ ಸಲ್ಲುವುದಿಲ್ಲ ಎಂಬುದಾಗಿ ಧ್ವನಿಸುತ್ತದೆ.

ಎರಡನೆಯ ವಚನವು ಭಕ್ತನಾದವನು ಯಾವ ರೀತಿ ಇರಬೇಕೆಂದು ತಿಳಿಸುತ್ತಾ ಅತಿಯಾದ ಆಸೆ ಭಕ್ತರಿಗೆ ಸಲ್ಲದು ಎಂಬುದಾಗಿ ಹೇಳುತ್ತದೆ. ಆಸೆಯೆಂಬುದು ಅರಸನಿಗೆ ಹೊರತು ಭಕ್ತನಿಗಲ್ಲ. ರೋಷವೆಂಬುದು ಯಮಧೂತರಿಗೆ ಹೊರತು ಶಿವಭಕ್ತರಿಗೆ ಅಲ್ಲ. ಒಳ್ಳೆಯವರಾದವರೂ ಶಿವಭಕ್ತರಾದವರೂ ಆಸೆ ಮತ್ತು ರೋಷ ಎರಡರಿಂದ ದೂರವಿರಬೇಕು ಎಂಬುದಾಗಿ ಈ ವಚನಗಳಲ್ಲಿ ತಿಳಿಸುತ್ತಾಳೆ.

ಈ ಎಲ್ಲಾ ವಚನಗಳನ್ನು ಗಮನಿಸಿದಾಗ ನಾವು ನಮ್ಮ ಜೀವನದಲ್ಲಿ ಯಾವ ರೀತಿಯ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ಎಂಬುದನ್ನು ತಿಳಿಸುತ್ತಾ ಕಾಯಕವೇ ಕೈಲಾಸ ಎಂಬುದನ್ನು ಕೂಡ ಹೇಳುತ್ತದೆ. ವಚನಗಳಲ್ಲಿರುವ ಎಲ್ಲಾ ಒಳ್ಳೆಯ ಅಂಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಬಾಳು ಬೆಳಗುವುದರ ಜೊತೆಗೆ ಇತರರ ಬಾಳನ್ನು ಬೆಳಗಬಹುದು.